<u>ಸಾಕ್ಷಿಯನ್ನು ದಿಃ**12.08.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಂ.ಜಿ.ವಕೀಲರಿಂದ:</u>

ಈ ದಾವೆಯನ್ನು ನನ್ನ ಆಸ್ತಿ ಸರ್ವೇ ನಂ.110/5 ಒತ್ತುವರಿಯಾಗಿದ್ದು ಅದನ್ನು 1 ನೇ ಪ್ರತಿವಾದಿಯಿಂದ ಬಿಡಿಸಿ ಕೊಡಿ ಎಂದು ಹೂಡಿರುತ್ತೇನೆ. ಸರ್ವೇ ನಂ.110/5 ರಲ್ಲಿ ಖರಾಬು ಸೇರಿ 1 ಎಕರೆ 35 ಗುಂಟೆ ಇರುತ್ತದೆ. ಸದರಿ ಆಸ್ತಿಯ ಚೆಕ್ಕು ಬಂದಿ ಪೂರ್ವಕ್ಕೆಃ ತೊರೆಹಳ್ಳ, ಪಶ್ಚಿಮಕ್ಕೆಃಕುಣಿಗಲ್-ತುಮಕೂರು ರಸ್ತೆ, ಉತ್ತರಕ್ಕೆಃಬಿ.ಗಂಗಣ್ಣನವರ ಸ್ವತ್ತು ಮತ್ತು ದಕ್ಷಿಣಕ್ಕೆಃಶಫೀ ಸಾಬ್ ಮತ್ತು ಇತರರು. ಸರ್ವೇ ನಂ.110/5 ಮೂಲತಃ ನಮ್ಮ ಕುಟುಂಬದ ತಿಮ್ಮಪ್ಪಯ್ಯರವರಿಗೆ ಸೇರಿದ್ದು. ಸದರಿಯವರು ನನ್ನ ತಾತ. ಸದರಿಯವರಿಗೆ ನನ್ನ ತಂದೆಯವರಿಗೆ ಒಬ್ಬರೇ ಮಗ.

1 ನೇ ಪ್ರತಿವಾದಿ ನನ್ನ ತಾತನ ತಮ್ಮ ಚೂರಯ್ಯರವರ ಮೊಮ್ಮಗ ಆಗಿರುತ್ತಾರೆ. ನನ್ನ ತಾತ ಹಾಗೂ ಚಿಕ್ಕ ತಾತನವರ ನಡುವೆ ಸರ್ವೇ ನಂ.110/5 ಮತ್ತು ಕುಟುಂಬದ ಆಸ್ತಿಗಳು ವಿಭಾಗ ಆಗಿರುತ್ತವೆ. ಸರ್ವೇ ನಂ.110/5 ರಲ್ಲಿ ನನ್ನ ತಾತ ಹಾಗೂ ಚಿಕ್ಕ ತಾತನವರಿಗೆ 1 ಎಕರೆ 35 ಗುಂಟೆಯಲ್ಲಿ ತಲಾ 35 ಗುಂಟೆ ವಿಭಾಗ ಆಗಿತ್ತು. ಸದರಿ ವಿಭಾಗದ ಕುರಿತು ನಾನು ದಾಖಲೆಯನ್ನು ನೋಡಿರುವುದಿಲ್ಲ. ಸದರಿ ವಿಭಾಗದಂತೆ ಪೂರ್ವಕ್ಕೆಃ ಚೂರಯ್ಯರವರ ಭಾಗಕ್ಕೆ ಬಂದ ಭಾಗ ಮತ್ತು ಪಶ್ಚಿಮಕ್ಕೆ ನಮ್ಮ ತಾತನವರಿಗೆ ಬಂದ ಭಾಗದ ಆಸ್ತಿ ಇತ್ತು. ನಮ್ಮ ತಾತನ ಭಾಗಕ್ಕೆ ಬಂದ 35 ಗುಂಟೆಯ ಆಸ್ತಿಯ ಚೆಕ್ಕು ಬಂದಿ ಪೂರ್ವಕ್ಕೆಃ ಚೂರಯ್ಯರವರ ಆಸ್ತಿ, ಪಶ್ಚಿಮಕ್ಕೆಃ ಕುಣಿಗಲ್-ತುಮಕೂರು ರಸ್ತೆ, ಉತ್ತರಕ್ಕೆಃಬಿ.ಗಂಗಣ್ಣನವರ ಸ್ವತ್ತು ಮತ್ತು ದಕ್ಷಿಣಕ್ಕೆಃಶಫೀ ಸಾಬ್ ಮತ್ತು ಇತರರು. ನಮ್ಮ

ತಾತನ ಭಾಗಕ್ಕೆ ಬಂದ ಆಸ್ತಿಯಲ್ಲಿ ನಾನು ಮತ್ತು ನನ್ನ ಸಹೋದರ ಮೂಡಲಯ್ಯ ಮನೆ ಕಟ್ಟಿಕೊಂಡಿರುತ್ತೇವೆ. ನನ್ನ ಚಿಕ್ಕ ತಾತನವರ ಭಾಗಕ್ಕೆ ಬಂದ 35 ಗುಂಟೆ ಆಸ್ತಿಗಳಲ್ಲಿ 1 ನೇ ಪ್ರತಿವಾದಿ ಮನೆ ಕಟ್ಟಿಕೊಂಡಿರುತ್ತಾರೆ. ನಾವು ಸದರಿ ಮನೆಗಳನ್ನು ಸರ್ವೇ ನಂಬರ್ ಗಳಲ್ಲಿಯೇ ಕಟ್ಟಿಕೊಂಡಿರುತ್ತೇವೆ. ನಮ್ಮ ತಂದೆಗೆ ಬಂದ 35 ಗುಂಟೆಯಲ್ಲಿ 4 ½ ಗುಂಟೆ ಯನ್ನು ಕುಟುಂಬದ ಪರವಾಗಿ ಚೂರಯ್ಯನ ಮಗ ಮೂಡಲಯ್ಯನವರಿಗೆ ಮಾರಾಟ ಮಾಡಿದ್ದು, ಉಳಿಕೆ ಆಸ್ತಿಯಲ್ಲಿ 10 ½ ಗುಂಟೆಯನ್ನು ನನ್ನ ತಂದೆ ಅವರ ಜೀವನಾಂಶಕ್ಕೆಂದು ಉಳಿಸಿಕೊಂಡಿದ್ದು, 15 ಗುಂಟೆಯನ್ನು ಹೊರತು ಪಡಿಸಿ ಉಳಿದ ಆಸ್ತಿಯನ್ನು ನಮ್ಮ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತೇವೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

<u>( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)</u>

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.